## ನಿಮ್ಮೊಡನೆ

# ಪ್ರೀ–ವೆಡ್ಡಿಂಗ್ ಫೋಟೊ ಶೂಟ್‌ನಲ್ಲಿ ಕಾಣುತ್ತಿರುವ 'ದುರಂತ ಬಿಂಬ'ಗಳು

**ಮುಡುಕತೊರೆ ದುರ್ಘಟನೆಯಲ್ಲಿ ವಧೂವರರು ಸಾವನ್ನಪ್ಪುವಂತಾಗಿದ್ದು ಪ್ರೀ–ವೆಡ್ಡಿಂಗ್ ಶೂಟಿಂಗ್‌ನ ಅತಿರೇಕಕ್ಕೆ ಸಮಾಜ ತೆತ್ತ ಬೆಲೆ. ಹೊಸ ಕನಸುಗಳೊಂದಿಗೆ ಗರಿಗೆದರಬೇಕಾಗಿದ್ದ ಯುವಜೋಡಿಯ ದುರಂತ, ಪ್ರೀ–ವೆಡ್ಡಿಂಗ್ ಶೂಟ್‌ನ ಅತಿರೇಕಗಳಿಗೆ ಹಾತೊರೆಯುವ ಯುವ ಜೋಡಿಗಳನ್ನು ಸದಾ ಕಾಡಬೇಕು.**

ಸಿನಿಮಾ ಎಂಬ ಮನರಂಜನಾ ಮಾಧ್ಯಮವು ಉದಯಿಸಿದ ಲಾಗಾಯ್ತಿನಿಂದಲೂ ಬದುಕಿನಲ್ಲಿ ಕಾಣಲಾಗದ್ದನ್ನು ಬೆಳ್ಳಿಪರದೆಯಲ್ಲಿ ಕಂಡು ಖುಷಿ ಅನುಭವಿಸುತ್ತಾ ಬಂದಿದೆ ನಮ್ಮ ಸಮಾಜ. ಇತ್ತೀಚಿನ ವರ್ಷಗಳಲ್ಲಿ ಸಿನಿಮಾದಲ್ಲಿ ನಡೆಯುವುದನ್ನು ಬದುಕಿನಲ್ಲಿಯೇ ಕಾಣಬೇಕೆಂಬ ಹಟ ಸಮಾಜವನ್ನು ತೀವ್ರವಾಗಿ ಕಾಡಿದಂತಿದೆ. ಅಂತಹ ಖಯಾಲಿಯ ಪರಿಣಾಮವೇ ಪ್ರೀ–ವೆಡ್ಡಿಂಗ್ ಫೋಟೊ ಶೂಟ್ ಎಂಬ ಪರಿಕಲ್ಪನೆ. ಹೆಸರೇ ಹೇಳುವಂತೆ ನಿಶ್ಚಿತಾರ್ಥ ಮಾಡಿಕೊಂಡ ಜೋಡಿಗಳು, ಮದುವೆಯ ಪೂರ್ವದಲ್ಲಿ, ಸಿನಿಮಾದ ನಾಯಕ–ನಾಯಕಿಯರಂತೆ ಕಂಗೊಳಿಸಿ ಮಾಡಿಸಿಕೊಳ್ಳುವ ಶೂಟಿಂಗ್ ಇದಾಗಿದೆ. ಮೊದಮೊದಲು ಸಿರಿವಂತ ಕುಟುಂಬಗಳಿಗೆ ಮಾತ್ರ ಹಿಡಿದಿದ್ದ ಈ 'ಹುಚ್ಚು' ಈಗ ಬಡ ಬೋರೇಗೌಡನ ಮನೆಯವರೆಗೂ ವ್ಯಾಪಿಸಿದೆ.

ಪ್ರೀ–ವೆಡ್ಡಿಂಗ್ ಫೋಟೊ ಶೂಟಿಂಗ್‌ಗಾಗಿ ಬಾಡಿಗೆ ನೀಡಲೆಂದೇ ಬೆಂಗಳೂರಿನಲ್ಲಿ ಹಲವು ಸ್ಟುಡಿಯೊಗಳು ತಲೆ ಎತ್ತಿವೆ. ಅಲ್ಲಿ 2–3 ಗಂಟೆ ಶೂಟಿಂಗ್‌ಗೆ ಹತ್ತಾರು ಸಾವಿರ ರೂಪಾಯಿ ಬಾಡಿಗೆ ಕೊಡಬೇಕಾಗುತ್ತದೆ. ಮದುವೆ ಗೌನ್‌ಗಳು, ಶೂಟಿಂಗ್ ಪರಿಕರಗಳನ್ನು ಬಾಡಿಗೆಗೆ ಕೊಡುವ ಉದ್ಯಮವೂ ದೊಡ್ಡದಾಗಿ ಬೆಳೆದಿದೆ. ತಮ್ಮ ವಿವಾಹಪೂರ್ವದ ಈ ಶೂಟಿಂಗ್, ಸಿನಿಮಾ ದೃಶ್ಯದ ತದ್ರೂಪವಾಗಿರಬೇಕೆಂದು ಅಪೇಕ್ಷಿಸಿ, ಅಂತಹ ಲೋಕೇಷನ್ ಹುಡುಕಿಕೊಂಡು ಪಕ್ಕದ ಕೇರಳವೋ ದೂರದ ಸ್ವಿಟ್ಜರ್ಲೆಂಡ್‌ಗೋ ಹೋಗುವ ಜೋಡಿಗಳ ಸಂಖ್ಯೆಗೇನೂ ಕಡಿಮೆ ಇಲ್ಲ. ಕೋವಿಡ್ ಕಾಟ ಆ ಹುಚ್ಚಾಟಕ್ಕೆ ಸಣ್ಣದೊಂದು ಬ್ರೇಕ್ ಹಾಕಿದೆ ಅಷ್ಟೇ.

ಸಮುದ್ರದ ತೀರಗಳಿಗೂ ಪ್ರೀ–ವೆಡ್ಡಿಂಗ್ ಶೂಟಿಂಗ್‌ಗಾಗಿ ಹೋಗುವುದಿದೆ. ಬಟ್ಟೆ ಬದಲಾಯಿಸಲು ಬೇಕಾದ ಟೆಂಟ್ ಸೇರಿದಂತೆ ಪಕ್ಷಿನೋಟದ ದೃಶ್ಯಗಳನ್ನು ಸೆರೆಹಿಡಿಯುವ ಡ್ರೋಣ್‌ವರೆಗೆ ಸಕಲ ವ್ಯವಸ್ಥೆಯನ್ನೂ ಮಾಡಿಕೊಂಡು ಬರುವ ಛಾಯಾಗ್ರಾಹಕರು ಅದಕ್ಕಾಗಿ ಲಕ್ಷಾಂತರ ರೂಪಾಯಿ ದರ ನಿಗದಿ ಮಾಡುವುದಿದೆ. ಪ್ರವಾಸಿ ತಾಣಕ್ಕೆ ಹೋಗಿ ಹೀಗೆ ಶೂಟಿಂಗ್ ಮಾಡಿಸಿಕೊಂಡು ಬರಲು ಜೋಡಿಯೊಂದು 2–3 ಲಕ್ಷ ರೂಪಾಯಿ ವ್ಯಯಿಸುತ್ತದೆ ಎಂಬ ಅಂದಾಜಿದೆ. ಈ ಜೋಡಿಗಳು ಮಾಡಿಸಿಕೊಳ್ಳುವ ಶೂಟಿಂಗ್‌ಗಳಾದರೂ ಎಂಥವು? ಬೆಡ್‌ಶೀಟ್‌ನಲ್ಲಿ ಮೈಸುತ್ತಿಕೊಂಡು ಅರೆನಗ್ನ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವುದು, ನಾಯಕ–ನಾಯಕಿಯಂತೆ ಮರ ಸುತ್ತುವುದು, ಮಳೆಯಲ್ಲಿ ತೋಯ್ದು ತೊಪ್ಪೆಯಾಗಿ ಅಪ್ಪಿಕೊಳ್ಳುವುದು, ತೀವ್ರವಾಗಿ ಗಾಯಗೊಂಡ ರೀತಿಯಲ್ಲಿ ಮೇಕಪ್ ಮಾಡಿಸಿಕೊಂಡು ಬಿಗಿದಪ್ಪುವುದು, ಗುಡ್ಡದ ಮೇಲಿನಿಂದ ಜಾರಿ ಬೀಳುತ್ತಿದ್ದ ವಧುವನ್ನು ವರ ಹೀರೊನಂತೆ ಬಂದು ರಕ್ಷಿಸುವುದು... ಇಂತಹದ್ದೇ ನೋಟಗಳು. ಮದುವೆಯೆಂದರೆ ಬದುಕಿನ ಸಂಭ್ರಮದ ಗಳಿಗೆ. ಆ ಮಧುರ ಕ್ಷಣಗಳನ್ನು ಪ್ರೀ–ವೆಡ್ಡಿಂಗ್ ಶೂಟಿಂಗ್ ಮತ್ತಷ್ಟು ಸವಿಯಾಗಿಸುವುದಾದರೆ ಅದೂ ಇರಲಿ. ಆದರೆ ಆ ಹುಮ್ಮಸ್ಸು ಅಪಾಯ ಹಾಗೂ ಅಪಸವ್ಯಗಳಿಗೆ ದಾರಿಯಾಗಬಾರದು.

ಮೈಸೂರಿನ ಮುಡುಕತೊರೆಯಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ವಧೂವರರು ಸಾವನ್ನಪ್ಪುವಂತಾಗಿದ್ದು ಪ್ರೀ–ವೆಡ್ಡಿಂಗ್ ಶೂಟಿಂಗ್‌ನ ಅತಿರೇಕಕ್ಕಾಗಿ ಸಮಾಜ ತೆತ್ತ ಬೆಲೆಯಲ್ಲದೆ ಮತ್ತೇನು? ದಡದಲ್ಲಿ ನಿಂತು ಮಾಡುತ್ತಿದ್ದ ಶೂಟಿಂಗ್‌ಗೆ ಪೋಸ್ ಕೊಡಲು ನೀರ ನಡುವೆ ತೆಪ್ಪದಲ್ಲಿ ತೇಲಿಹೋದ ಆ ವಧೂವರರು ಆಯತಪ್ಪಿ ನದಿಯಲ್ಲಿ ಮುಳುಗುವಂತಾದ ಈ ದುರಂತ ಘಟನೆಯಾದರೂ ಸಮಾಜದ ಕಣ್ಣನ್ನು ತೆರೆಸಬೇಕು. ಹೊಸ ಕನಸುಗಳೊಂದಿಗೆ ಗರಿಗೆದರಬೇಕಾಗಿದ್ದ ಯುವಜೋಡಿಯ ಬದುಕು ಈ ರೀತಿ ಶಾಶ್ವತ ಫೋಟೊ ಫ್ರೇಮಿನೊಳಗೆ ಬಂದಿಯಾಗುವಂತಾಗಿದ್ದು, ಪ್ರೀ–ವೆಡ್ಡಿಂಗ್ ಶೂಟ್‌ನ ಅತಿರೇಕಗಳಿಗೆ ಹಾತೊರೆಯುವ ಯುವ ಜೋಡಿಗಳನ್ನು ಸದಾ ಕಾಡಬೇಕು.

ಮದುವೆಗೆ ಕೋಟ್ಯಂತರ ರೂಪಾಯಿ ಸುರಿಯುವ ಸಿರಿವಂತರ ಕುರಿತು ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ತಲೆ ಕೆಡಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಆದರೆ, ಪ್ರೀ–ವೆಡ್ಡಿಂಗ್ ಶೂಟ್‌ನ 'ಬಲೆ'ಗೆ ಮಧ್ಯಮವರ್ಗವೇ ಹೆಚ್ಚಾಗಿ ಬೀಳುತ್ತಿರುವುದು ಕಳವಳಕಾರಿ. ಮೊದಲೇ ಆಡಂಬರದ ಮದುವೆಗೆ ದೊಡ್ಡ ಖರ್ಚು ಮಾಡುತ್ತಿರುವ ಈ ವರ್ಗಕ್ಕೆ ಇದು ಮತ್ತೊಂದು ಹೊರೆ. ತಾಯ್ತಂದೆಯರು ಮದುವೆಯ ಖರ್ಚಿಗಾಗಿ ಮಾರುವ ಹೊಲದ ಪ್ರಮಾಣವೂ ಇದರಿಂದ ಹೆಚ್ಚಾದೀತು. ಹೀರೊ, ಹೀರೊಯಿನ್‌ಗಳಂತೆ ಮೆರೆಯಲು ಬಯಸುವ, ಸ್ವ–ವೈಭವೀಕರಣದ ಗೀಳು ಅಂಟಿಸಿಕೊಂಡಿರುವ ಯುವ ಪೀಳಿಗೆ ಇದನ್ನೆಲ್ಲ ಅರ್ಥಮಾಡಿಕೊಳ್ಳಬೇಕು. ಹೊಣೆಯರಿತು ವರ್ತಿಸಬೇಕು.

ಫೋಟೊ ತೆಗೆಯಲು ರೀಲು ಬಳಸುತ್ತಿದ್ದ ಕಾಲದಲ್ಲಿ ಒಂದೊಂದು ಚಿತ್ರ ಕ್ಲಿಕ್ಕಿಸುವಾಗಲೂ ಅಳೆದು, ಸುರಿದು ಯೋಚಿಸಲಾಗುತ್ತಿತ್ತು. ಈಗಿನ ಡಿಜಿಟಲ್ ಯುಗದಲ್ಲಿ ಅದ್ಯಾವುದೂ ಲೆಕ್ಕಕ್ಕಿಲ್ಲ. ಛಾಯಾಚಿತ್ರಗಳು ಕಳೆದುಹೋದ ಸುಮಧುರ ಕ್ಷಣಗಳನ್ನು ಮುಂದೊಂದು ದಿನ ಕುಳಿತು ನೆನಪಿಸಿಕೊಳ್ಳಲು ಇರುವ ಸಾಧನಗಳು. ಅವುಗಳು ದುರಂತದ ಕಥೆಗಳನ್ನು ಹೇಳುವ ಫ್ರೇಮ್‌ಗಳಲ್ಲಿ ಎಂದಿಗೂ ಬಂದಿಯಾಗದಿರಲಿ.

■ ಪ್ರವೀಣ ಕುಲಕರ್ಣಿ



ಈಶ್ವರ್